# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1405 (1612) |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.12.2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಸರ್ಕಾರದ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ವಿದೇಶದಲ್ಲಿ ಅಧ್ಯಯನ ಮಾಡುವ ಎಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಿದೆ. (ಯಾವ ಯಾವ ಕೋರ್ಸ್ ಗಳಿಗೆ ಎಷ್ಟು ವಿದ್ಯಾರ್ಥಿ ವೇತನ ನೀಡಲಾಗಿದೆ) ಮತ್ತು ಈ ವಿದ್ಯಾರ್ಥಿ ವೇತನ ಪಡೆಯಲು ಪ್ರಸ್ತುತ ಇರುವ ಮಾನದಂಡಗಳೇನು.</td><td>ಸರ್ಕಾರದ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಒಟ್ಟು 496 ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ವಿದೇಶದಲ್ಲಿ ಅಧ್ಯಯನ ಮಾಡಲು ವಿದ್ಯಾರ್ಥಿ ವೇತನ ನೀಡಲಾಗಿದ್ದು, ವರ್ಷವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ವರ್ಷ</th><th>ಅಭ್ಯರ್ಥಿಗಳ ಸಂಖ್ಯೆ</th></tr>
<tr><td>1</td><td>2022-23</td><td>98</td></tr>
<tr><td>2</td><td>2023-24</td><td>152</td></tr>
<tr><td>3</td><td>2024-25</td><td>246</td></tr>
<tr><td colspan="2">ಒಟ್ಟು</td><td>496</td></tr>
</table>
ಕೋರ್ಸ್‌ವಾರು ವಿದ್ಯಾರ್ಥಿ ವೇತನ ನೀಡಲಾಗಿರುವ ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ.<br><br>ಸರ್ಕಾರದ ಆದೇಶ ಸಂಖ್ಯೆ:ಸಕಇ 328 ಎಸ್‌ಎಲ್‌ಪಿ 2024, ದಿನಾಂಕ:12.09.2024ರಲ್ಲಿ ಡಾ|| ಬಿ.ಆರ್ ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯವೇತನ ಯೋಜನೆಯಡಿ ಪರಿಶಿಷ್ಟ ಜಾತಿಯ ಅಭ್ಯರ್ಥಿ/ಸಂಶೋಧನಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲಾಗಿರುವ ಮಾರ್ಗಸೂಚಿಗಳಲ್ಲಿ ಮಾನದಂಡವನ್ನು ನಿಗಧಿಪಡಿಸಲಾಗಿದ್ದು, ಆದೇಶದ ಮಾರ್ಗಸೂಚಿಯ ಪ್ರತಿ ಅನುಬಂಧ-2ರಲ್ಲಿ ಒದಗಿಸಿದೆ.</td></tr>
<tr><td>ಆ</td><td>ಡಾ.ಬಿ.ಆರ್. ಅಂಬೇಡ್ಕರ್ ರವರು ಅಧ್ಯಯನ ನಡೆಸಿದ ಮತ್ತು ಕಲಿತ ವಿಶ್ವವಿದ್ಯಾಲಯವಾದ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಮತ್ತು ಕೇಂಬ್ರಿಡ್ ವಿಶ್ವವಿದ್ಯಾಲಯಗಳಂತಹ ದೊಡ್ಡ ವಿಶ್ವ ವಿದ್ಯಾಲಯಗಳಲ್ಲಿ</td><td>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಡಾ.ಬಿ.ಆರ್. ಅಂಬೇಡ್ಕರ್ ರವರು ಅಧ್ಯಯನ ನಡೆಸಿದ ಮತ್ತು ಕಲಿತ ವಿಶ್ವವಿದ್ಯಾಲಯಗಳಾದ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಮತ್ತು ಕೇಂಬ್ರಿಡ್ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ/ಸಂಶೋಧನೆ (ಪಿಹೆಚ್‌ಡಿ) ಅಧ್ಯಯನ ಮಾಡಲು ನೀಡಲಾಗುವ ಶಿಷ್ಯವೇತನ ಯೋಜನೆಯಾದ ಡಾ||</td></tr>
</table>

| | | |
|---|---|---|
| | ಅಧ್ಯಯನ ಮಾಡುತ್ತಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತಿರುವುದು ಸ್ವಾಗತಾರ್ಹ ಕ್ರಮವಾಗಿ ಡಾ.ಬಿ.ಆರ್. ಅಂಬೇಡ್ಕರ್ ರವರ ಸ್ಮರಣಾರ್ಥ ಇತರೆ ಸಮುದಾಯದ ವಿದ್ಯಾರ್ಥಿಗಳಿಗೆ ಈ ವಿಶ್ವವಿದ್ಯಾಲಯಗಳಲ್ಲಿ ಓದಲು ಅವಕಾಶ ಸಿಕ್ಕಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ. | ಬಿ.ಆರ್ ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯವೇತನ ಯೋಜನೆಯಂತೆ, ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ QS ಟಾಪ್ 500ರಲ್ಲಿ ಸ್ಥಾನ ಪಡೆದಿರುವ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಮತ್ತು ಹಿಂದುಳಿದ ವರ್ಗಗಳ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ/ಸಂಶೋಧನಾರ್ಥಿಗಳಿಗೆ Top One thousand world University Ranking ನಲ್ಲಿ ಸ್ಥಾನ ಪಡೆದಿರುವ ವಿದೇಶಿ ವಿಶ್ವವಿದ್ಯಾಲಯದಲ್ಲಿ ವಿದೇಶ ವ್ಯಾಸಂಗ ಮಾಡಲು ಧನ ಸಹಾಯದ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ Ranking ರೊಳಗೆ ಬರುವ ವಿಶ್ವವಿದ್ಯಾಲಯಗಳಲ್ಲಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಮತ್ತು ಕೇಂಬ್ರಿಡ್ ವಿಶ್ವವಿದ್ಯಾಲಯಗಳು ಸಹ ಒಂದಾಗಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಂತೆ ಇತರೆ ಸಮುದಾಯದ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ವ್ಯಾಸಂಗ ಮಾಡಲು ಸರ್ಕಾರವು ಧನ ಸಹಾಯ ಯೋಜನೆಗಳನ್ನು ರೂಪಿಸಿರುತ್ತದೆ. ಸದರಿ ಇಲಾಖೆಗಳ ಅಧಿಕೃತ ವೆಬ್‌ಸೈಟ್ (https://bcwd.karnataka.gov.in, https://dom.karnataka.gov.in) ರಲ್ಲಿ ವಿವರಗಳನ್ನು ಲಭ್ಯಪಡಿಸಲಾಗಿದೆ. |
| ಇ | 2024-25 ನೇ ಸಾಲಿನಲ್ಲಿ ವಿದೇಶದಲ್ಲಿ ಅಧ್ಯಯನ ಮಾಡಲು ಎಷ್ಟು ವಿದ್ಯಾರ್ಥಿಗಳು ವಿದೇಶಿ ಶಿಕ್ಷಣ ಸಾಲಕ್ಕೆ (Overseas Education Loan) ಅರ್ಜಿಯನ್ನು ನೀಡಿರುತ್ತಾರೆ ಮತ್ತು ಸ್ವೀಕೃತವಾದ ಅರ್ಜಿಗಳಲ್ಲಿ; ಎಷ್ಟು ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲ ಮಂಜೂರಾಗಿದೆ; (ಎಂಬುದರ ಬಗ್ಗೆ ಮಾಹಿತಿ ನೀಡುವುದು) | ಡಾ|| ಬಿ.ಆರ್ ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯವೇತನ ಯೋಜನೆಯ ಮಾರ್ಗಸೂಚಿಗಳನ್ನು ಹೊರಡಿಸುವ ಪೂರ್ವದಲ್ಲಿಯೇ 2024-25 ನೇ ಸಾಲಿನಲ್ಲಿ ನಿಗಮಗಳ ಕ್ರಿಯಾ ಯೋಜನೆಗಳನ್ನು ಹೊರಡಿಸಲಾಗಿರುವುದರಿಂದ ವಿದೇಶ ವ್ಯಾಸಂಗಕ್ಕೆ ಕ್ರಿಯಾ ಯೋಜನೆಯಲ್ಲಿ ಅನುದಾನ ಹಂಚಿಕೆಯಾಗದ ಕಾರಣ ಅಭ್ಯರ್ಥಿಗಳಿಂದ ಶಿಕ್ಷಣ ಸಾಲಕ್ಕೆ ಅರ್ಜಿಗಳನ್ನು ಸ್ವೀಕರಿಸಿರುವುದಿಲ್ಲ ಮತ್ತು ಮಂಜೂರು ಮಾಡಿರುವುದಿಲ್ಲ. |
| ಈ | ಶಿಕ್ಷಣ ಸಾಲ ಪಡೆಯಲು ಪ್ರಸ್ತುತ ಇರುವ ಮಾನದಂಡಗಳೇನು ಮತ್ತು ಈ ಕುರಿತು ಪ್ರಸ್ತುತ ಇರುವ ಯೋಜನೆಗಳು ಯಾವುವು? | ಡಾ.ಬಿ.ಆರ್. ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯವೇತನ ಯೋಜನೆಯ ಮಾರ್ಗಸೂಚಿ ಅನ್ವಯ ನೀಡಲಾಗುವ ಸಾಲ ಸೌಲಭ್ಯಕ್ಕೆ ಕುಟುಂಬದ ವಾರ್ಷಿಕ ಆದಾಯದ ಮಾನದಂಡವನ್ನು ನಿಗಧಿಪಡಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.<br><br>ರೂ. 10.00 ಲಕ್ಷದಿಂದ ರೂ.20.00 ಲಕ್ಷದ ವರೆಗಿನ ಕುಟುಂಬದ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ. \| ಕುಟುಂಬದ ಆದಾಯ ರೂ. 10.00 ಲಕ್ಷ ಇರುವ ಅಭ್ಯರ್ಥಿಗಳಿಗೆ ನೀಡಲಾಗುವ ವೆಚ್ಚದಲ್ಲಿ ಶೇಕಡ 50ರಷ್ಟು ಧನ ಸಹಾಯ ಮತ್ತು ಶೇಕಡ |

| | | | |
|---|---|---|---|
| | | | 50ರಷ್ಟು ಸಾಲವನ್ನು ಇಲಾಖಾ ಅದೀನದಲ್ಲಿರುವ ವಿವಿಧ ನಿಗಮಗಳಿಂದ ಅರ್ಹ ಅಭ್ಯರ್ಥಿಗಳು ಪಡೆಯಬಹುದು. |
| | | ರೂ. 20.00 ಲಕ್ಷದಿಂದ ರೂ.30.00 ಲಕ್ಷದ ವರೆಗಿನ ಕುಟುಂಬದ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ. | ಕುಟುಂಬದ ಆದಾಯ ರೂ. 10.00 ಲಕ್ಷ ಇರುವ ಅಭ್ಯರ್ಥಿಗಳಿಗೆ ನೀಡಲಾಗುವ ವೆಚ್ಚದಲ್ಲಿ ಶೇಕಡ 50ರಷ್ಟು ಧನ ಸಹಾಯ ಮತ್ತು ಶೇಕಡ.25 ರಷ್ಟು ಸಾಲವನ್ನು ಇಲಾಖಾ ಅದೀನದಲ್ಲಿರುವ ವಿವಿಧ ನಿಗಮಗಳಿಂದ ಅರ್ಹ ಅಭ್ಯರ್ಥಿಗಳು ಪಡೆಯಬಹುದು. |

**ಸಂಖ್ಯೆ:ಸಕಇ 969 ಪಕವಿ 2025**

**(ಡಾ. ಹೆಚ್.ಸಿ. ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

# ಕೋರ್ಸ್‌ವಾರು ವಿದ್ಯಾರ್ಥಿ ವೇತನ ನೀಡಲಾಗಿರುವ ವಿವರ

## ಅನುಬಂಧ-1

| Sl No | Subject | 2021-22 | Financial Assistance | 2022-23 | Financial Assistance | 2023-24 | Financial Assistance | 2024-25 | Financial Assistance |
|---|---|---|---|---|---|---|---|---|---|
| 1 | Agriculture Sciences and Medicine | 0 | 0 | 4 | 7951030 | 4 | 18447368 | 5 | 21341462 |
| 2 | Engineering AND Management | 54 | 138857143 | 73 | 145106110 | 119 | 548809197 | 170 | 725609750 |
| 3 | Humanities, Social Science, Fine Arts and Law | 3 | 7714280 | 6 | 11926530 | 5 | 23059215 | 10 | 42682936 |
| 4 | International Commerce, Economics, Accounting Finance | 3 | 7714291 | 7 | 13914285 | 12 | 55342110 | 38 | 162195122 |
| 5 | Pure Sciences and Applied Sciences | 10 | 25714286 | 8 | 15902045 | 12 | 55342110 | 23 | 98170730 |
| | Grand Total | 70 | 180000000 | 98 | 194800000 | 152 | 701000000 | 246 | 1.05E+09 |

"ಅನುಬಂಧ-01"

# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಪರಿಶಿಷ್ಟ ಜಾತಿಯ ಅಭ್ಯರ್ಥಿ/ಸಂಶೋಧನಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ಅಧೀನದ "ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಮೂಲಕ "ಡಾ. ಬಿ.ಆರ್. ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯವೇತನ" ಯೋಜನೆಯಡಿ ಉನ್ನತ ವ್ಯಾಸಂಗಕ್ಕೆ ಅವಕಾಶದ ನೂತನ ಮಾರ್ಗಸೂಚಿಗಳ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಸಕಇ 468 ಪಕವಿ 2021, ದಿನಾಂಕ: 11-08-2021.
2. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಸಕಇ 468 ಪಕವಿ 2020, ದಿನಾಂಕ: 21-09-2021.
3. ಸರ್ಕಾರದ ಆದೇಶ ಸಂಖ್ಯೆ: ಸಕಇ 493 ಎಸ್ ಎಲ್ ಪಿ 2022, ದಿನಾಂಕ: 12-07-2022
4. ಸರ್ಕಾರದ ಆದೇಶ ಸಂಖ್ಯೆ: ಸಕಇ 494 ಎಸ್ ಎಲ್ ಪಿ 2022, ಬೆಂಗಳೂರು, ದಿನಾಂಕ: 17-11-2022.
5. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಸಕಇ 468 ಪಕವಿ 2020, ದಿನಾಂಕ: 27-02-2023.
6. ಸರ್ಕಾರದ ಆದೇಶ ಸಂಖ್ಯೆ: ಸಕಇ 400 ಪಕವಿ 2021 ಬೆಂಗಳೂರು, ದಿನಾಂಕ: 21-03-2023.
7. ಸರ್ಕಾರದ ಆದೇಶ ಸಂಖ್ಯೆ: ಸಕಇ 20 ಎಸ್ ಎಲ್ ಪಿ 2023 ಬೆಂಗಳೂರು, ದಿನಾಂಕ: 28-03-2023.
8. ಸರ್ಕಾರದ ಆದೇಶ ಸಂಖ್ಯೆ: SWd-PETCOS-6(FS)/3/2023-PETC-SOCIAL WELFARE COMMISSIONER (E-1032772), ಬೆಂಗಳೂರು ದಿನಾಂಕ: 15-05-2023.
9. ಸರ್ಕಾರದ ಆದೇಶ ಸಂಖ್ಯೆ: SWD-PETC0S-6(FS)/12/2023-PETC-SOCIAL WELFARE COMMISSIONER ಬೆಂಗಳೂರು. ದಿನಾಂಕ: 07-07-2023.
10. ಸರ್ಕಾರದ ಆದೇಶ ಸಂಖ್ಯೆ: ಸಕಇ 477 ಎಸ್ ಎಲ್ ಪಿ 2023 ಬೆಂಗಳೂರು, ದಿನಾಂಕ: 14-07-2023.
11. ಸರ್ಕಾರದ ಆದೇಶ ಸಂಖ್ಯೆ: ಸಕಇ 161 ಪಕವಿ 2023, ಬೆಂಗಳೂರು ದಿನಾಂಕ: 07-10-2023.
12. ಸರ್ಕಾರದ ಆದೇಶ ಸಂಖ್ಯೆ: File No: SWD-PETC0S-6(FS)/32/2023-PETC(E Office-1181745) ದಿನಾಂಕ: 07-10-2023
13. ಸರ್ಕಾರದ ಆದೇಶ ಸಂಖ್ಯೆ: SWD-PETCOS-6(FS)/23/2023-PETC (E-1159105) ಬೆಂಗಳೂರು, ದಿನಾಂಕ: 27.11.2023
14. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: SWD-PETCOS-6(FS)/23/2023 (1159105) ದಿನಾಂಕ: 01.12.2023
15. ಸರ್ಕಾರದ ಆದೇಶ ಸಂಖ್ಯೆ: ಸಕಇ 495 ಎಸ್‌ಎಲ್‌ಪಿ 2023, ಬೆಂಗಳೂರು, ದಿನಾಂಕ: 11.12.2023
16. ಸರ್ಕಾರದ ಆದೇಶ ಸಂಖ್ಯೆ: ಸಕಇ 182 ಎಸ್‌ಎಲ್‌ಪಿ 2024, ಬೆಂಗಳೂರು, ದಿನಾಂಕ: 06.06.2024

17. ಸರ್ಕಾರದ ಆದೇಶ ಸಂಖ್ಯೆ: ಸಕಇ 414 ಪಕವಿ 2024, ಬೆಂಗಳೂರು, ದಿನಾಂಕ: 08.08.2024
18. ಮಾನ್ಯ ಇಲಾಖಾ ಸಚಿವರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ನೇತೃತ್ವದಲ್ಲಿ ದಿನಾಂಕ: 27-08-2024 ರಂದು ನಡೆದ ಸಭೆಯಲ್ಲಿ ನಿರ್ಣಯ.
19. ಅಪರ ನಿರ್ದೇಶಕರು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ ಇವರ ಏಕಕಡತ ಸಂಖ್ಯೆ: SWD-PETC0S-6(FS)/254/2024 ಇ-1450612
20. ಸರ್ಕಾರದ ಆದೇಶ: ಸಂಖ್ಯೆ: ಸಕಇ 331 ಎಸ್ ಎಲ್ ಪಿ 2024, ಬೆಂಗಳೂರು, ದಿನಾಂಕ:12-09-2024

******

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಿಂದ (16)ರಲ್ಲಿ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಪರಿಶಿಷ್ಟ ಸಮುದಾಯದ ಅಭ್ಯರ್ಥಿ/ಸಂಶೋಧನಾರ್ಥಿಗಳು ವಿದೇಶಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ/ಪಿಹೆಚ್‌ಡಿ ಉನ್ನತ ವ್ಯಾಸಂಗ ಕೈಗೊಳ್ಳಲು ಪ್ರಸ್ತುತ ಜಾರಿಯಲ್ಲಿರುವ "ಪ್ರಬುದ್ಧ" ಯೋಜನೆಗೆ ಸಂಬಂಧಿಸಿದಂತೆ ಅನೇಕ ಸರ್ಕಾರಿ ಆದೇಶಗಳು ಚಾಲ್ತಿಯಲ್ಲಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ:(17)ರಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯದಂತೆ ಈ ಸಂಬಂದ ಸಂಪೂರ್ಣವಾಗಿ ಪರಿಷ್ಕರಿಸಿ ಒಂದೇ ಸರ್ಕಾರಿ ಆದೇಶದಲ್ಲಿ ಮಾರ್ಗಸೂಚಿಗಳ ಕುರಿತು ಸೂಕ್ತ ಆದೇಶ ಹೊರಡಿಸುವಂತೆ ಅಪರ ನಿರ್ದೇಶಕರು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ:(18)ರಲ್ಲಿ ಏಕಕಡತ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (19)ರ ಸರ್ಕಾರಿ ಆದೇಶದಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ದಲಿತ ಸಂಘಟನೆಯ ನಾಯಕರೊಂದಿಗೆ ದಿನಾಂಕ:27-08-2024 ರಂದು ನಡೆದ ಸಭೆಯ ನಿರ್ಣಯದಂತೆ, ಹಿಂದಿನ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಹೆಸರನ್ನು "ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ" ಹಾಗೂ ಜಾರಿಯಲ್ಲಿದ್ದ "ಪ್ರಬುದ್ಧ" ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಶಿಷ್ಯವೇತನ ಯೋಜನೆಯನ್ನು "ಡಾ. ಬಿ.ಆರ್. ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯವೇತನ ಯೋಜನೆ" ಗಳ ಹೆಸರನ್ನು ಮರುಪದನಾಮೀಕರಿಸಿ ಆದೇಶಿಸಲಾಗಿದೆ.

ಮೇಲ್ಕಂಡ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ, ಬೆಂಗಳೂರು ಇವರ ಮೂಲಕ ಪರಿಶಿಷ್ಟ ಜಾತಿಯ ಅಭ್ಯರ್ಥಿ/ಸಂಶೋಧನಾರ್ಥಿಗಳು ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ "ಡಾ. ಬಿ.ಆರ್. ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯವೇತನ ಯೋಜನೆಯಡಿ ಸ್ನಾತಕೋತ್ತರ ಪದವಿ/ಪಿಹೆಚ್‌ಡಿ ಪದವಿಗಳ ಅಧ್ಯಯನ ಕೈಗೊಳ್ಳಲು ಪರಿಷ್ಕೃತ ಮಾರ್ಗಸೂಚಿಗಳನ್ನು ರಚಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶ.

**<u>ಸರ್ಕಾರದ ಆದೇಶ: ಸಂಖ್ಯೆ: ಸಕಇ 328 ಎಸ್ ಎಲ್ ಪಿ 2024, ಬೆಂಗಳೂರು</u>**

**<u>ದಿನಾಂಕ:12-09-2024.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಂತೆ, "ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ, ಬೆಂಗಳೂರು ಇವರ ಮೂಲಕ ಪರಿಶಿಷ್ಟ ಜಾತಿಯ

ಅಭ್ಯರ್ಥಿ/ಸಂಶೋಧನಾರ್ಥಿಗಳು ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ "ಡಾ. ಬಿ.ಆರ್. ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯವೇತನ ಯೋಜನೆಯಡಿ ಸ್ನಾತಕೋತ್ತರ ಪದವಿ/ಪಿಹೆಚ್‌ಡಿ ಪದವಿಗಳ ಅಧ್ಯಯನ ಕೈಗೊಳ್ಳಲು 2024-25ನೇ ಸಾಲಿನಿಂದ ನೂತನ ಮಾರ್ಗಸೂಚಿಗಳು ಜಾರಿಗೆ ಬರುವಂತೆ ಈ ಕೆಳಕಂಡಂತೆ ರಚಿಸಿ ಆದೇಶಿಸಿದೆ.

ಮುಂದುವರೆದು, ಈ ಹಿಂದೆ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ ಉನ್ನತ ವ್ಯಾಸಂಗ ಕೈಗೊಳ್ಳಲು ಈ ಹಿಂದೆ ಜಾರಿಯಲ್ಲಿದ್ದ ಎಲ್ಲಾ ಆದೇಶಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

**1.ಯೋಜನೆಯ ಉದ್ದೇಶ:**

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಸ್ನಾತಕೋತ್ತರ ಪದವಿ/ಪಿಹೆಚ್‌ಡಿ ಉನ್ನತ ವ್ಯಾಸಂಗಕ್ಕೆ ಅಗತ್ಯವಾದ ಧನ ಸಹಾಯ ನೀಡುವ ಉದ್ದೇಶದಿಂದ ಯೋಜನೆಯನ್ನು ಜಾರಿಗೆ ತರಲಾಗಿದೆ.

ಈ ಕೆಳಕಂಡ ಕೋರ್ಸ್ ಗಳನ್ನು ಸರ್ಕಾರ ಕಾಲಕಾಲಕ್ಕೆ ಹೊರಡಿಸಬಹುದಾದ ವಿದೇಶಿ/ವಿದೇಶಿ ವಿಶ್ವ ವಿದ್ಯಾಲಯ/ಸಂಸ್ಥೆಗಳಲ್ಲಿ ಅಧ್ಯಯನ ಮಾಡಲು ಅವಕಾಶವಿದೆ.

| Sl.No. | Fields of Study (ಅಧ್ಯಯನದ ಕ್ಷೇತ್ರಗಳು) |
|---|---|
| 1. | Engineering and Management |
| 2. | Pure Sciences and Applied Sciences |
| 3. | Agriculture Sciences |
| 4. | Medicine |
| 5. | International Commerce, Economics, Accounting Finance |
| 6. | Humanities, Social Science, Fine Arts and Law |

ಯಾವುದೇ ಅಧ್ಯಯನ ಕ್ಷೇತ್ರ ಸೇರಿಸುವ ಅಥವಾ ತೆಗೆದು ಹಾಕುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

**1.1 ಅರ್ಜಿ ಸಲ್ಲಿಸಲು ಅವಶ್ಯಕ ದಾಖಲೆಗಳು:**

ಅಭ್ಯರ್ಥಿಯು ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ತೆರಳುವ ಪೂರ್ವದಲ್ಲಿ "ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಅಧಿಕೃತ ಜಾಲತಾಣದಲ್ಲಿ ಆನ್ ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬೇಕು.

1. **ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಪ್ ಲೋಡ್ ಮಾಡಬೇಕಾದ ದಾಖಲೆಗಳು.**
    1. ಅಭ್ಯರ್ಥಿಯ ಆಧಾರ್ ಕಾರ್ಡ್.
    2. ಅಭ್ಯರ್ಥಿಯ ಜನನ ಪ್ರಮಾಣ ಪತ್ರ.
    3. ಅಭ್ಯರ್ಥಿಯ S.S.L.C ಪ್ರಮಾಣ ಪತ್ರ.
    4. ಜಾತಿ ಪ್ರಮಾಣ ಪತ್ರ.
    5. ಆದಾಯ ಪ್ರಮಾಣ ಪತ್ರ (ಚಾಲ್ತಿಯಲ್ಲಿರುವ ವರ್ಷ).

3.ಧನಸಹಾಯ ಹಾಗೂ ಸಾಲ:

| ಕ್ರ.ಸಂ. | ವಾರ್ಷಿಕ ಆದಾಯ | ಧನ ಸಹಾಯ |
|---|---|---|
| 01. | ಅ.) ರೂ. 10.00 ಲಕ್ಷದ ವರೆಗಿನ ಕುಟುಂಬದ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ | • ವಿಶ್ವ ವಿದ್ಯಾನಿಲಯದ ಕೋರ್ಸ್ ಶುಲ್ಕ- 100%<br>• ವಾರ್ಷಿಕ ನಿರ್ವಹಣಾ ವೆಚ್ಚ ಗರಿಷ್ಠ - ರೂ.16,00,000/- ( 1. ಊಟ ಮತ್ತು ವಸತಿ ವೆಚ್ಚ ರೂ. 12 ಲಕ್ಷಗಳು, 2. ವೀಸಾ, ವಿಮಾನ ವೆಚ್ಚ, ಹಾಗೂ ವಿಮಾ ಶುಲ್ಕ ರೂ. 4 ಲಕ್ಷಗಳು)<br>• ವಿಸಾ ಶುಲ್ಕ. (ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ವತಿಯಿಂದ MSIL ಮೂಲಕ ಭರಿಸುವುದು )<br>• ವಿಮಾ ಶುಲ್ಕ. (ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ MSIL ಮೂಲಕ ಭರಿಸುವುದು )<br>• ಲ್ಯಾಪ್ ಟಾಪ್, ಪುಸ್ತಕ ಮತ್ತು ಇತರೆ ಶುಲ್ಕ (ವಾರ್ಷಿಕ)-ರೂ.1.00 ಲಕ್ಷ.<br>• ವಿಮಾನ ಪ್ರಯಾಣ ವೆಚ್ಚ. (ಕೋರ್ಸ್ ಪೂರ್ಣಾವಧಿಯಲ್ಲಿ ಒಂದು ಬಾರಿ ಮಾತ್ರ ಏಕನಾಮಿಕ್ ಕ್ಲಾಸ್ ನಲ್ಲಿ ವಿದೇಶದಲ್ಲಿ ವ್ಯಾಸಂಗಕ್ಕೆ ಪ್ರಯಾಣಿಸಲು ಮತ್ತು ವಿದೇಶದಿಂದ ಒಂದು ಬಾರಿ ಸ್ವದೇಶಕ್ಕೆ ಪ್ರಯಾಣಿಸಲು ಅವಕಾಶವಿರುತ್ತದೆ.)<br><br>ಅಭ್ಯರ್ಥಿಯ ತಂದೆ ಮತ್ತು ತಾಯಿ ಇಬ್ಬರು ಕೇಂದ್ರ/ರಾಜ್ಯ ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಯಲ್ಲಿ ಗ್ರೂಪ-ಡಿ ಸಿಬ್ಬಂದಿಯಾಗಿದ್ದರೂ ಸಹ ಆದಾಯ ಮಿತಿಯಲ್ಲಿ ಸಂಪೂರ್ಣ ವಿನಾಯ್ತಿ ನೀಡಲಾಗುವುದು.<br><br>ಅಭ್ಯರ್ಥಿಯ ತಂದೆ ಅಥವಾ ತಾಯಿ ಇಬ್ಬರಲ್ಲಿ ಒಬ್ಬರು ಮಾತ್ರ ಕೇಂದ್ರ/ರಾಜ್ಯ ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಯಲ್ಲಿ ಗ್ರೂಪ್-ಡಿ ಸಿಬ್ಬಂದಿಯಾಗಿದ್ದರೂ ಸಹ ಆದಾಯ ಮಿತಿಯಲ್ಲಿ ಸಂಪೂರ್ಣ ವಿನಾಯ್ತಿ ನೀಡಲಾಗುವುದು. |
| 2. | ಆ.) ರೂ. 10.00 ಲಕ್ಷದಿಂದ ರೂ.20.00 ಲಕ್ಷದ ವರೆಗಿನ ಕುಟುಂಬದ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ : | ಈ ಮೇಲ್ಕಂಡ ಎಲ್ಲಾ ವೆಚ್ಚದಲ್ಲಿ ಶೇ.50 ರಷ್ಟು ಸಹಾಯಧನ ಹಾಗೂ ಶೇ.50 ರಷ್ಟು ಸಾಲವನ್ನು ಇಲಾಖಾ ಅಧೀನದಲ್ಲಿರುವ ವಿವಿಧ ನಿಗಮಗಳಿಂದ ಅರ್ಹ ಅಭ್ಯರ್ಥಿಗಳು ಪಡೆಯಬಹುದು. |

6. ಅಭ್ಯರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು (ಕನಿಷ್ಠ 10 ವರ್ಷಗಳು ರಾಜ್ಯದಲ್ಲಿ ವ್ಯಾಸಂಗ ಮಾಡಿರಬೇಕು ಹಾಗೂ ವ್ಯಾಸಂಗ ಮಾಡಿದ ಬಗ್ಗೆ ಶೈಕ್ಷಣಿಕ ದಾಖಲೆಗಳನ್ನು Upload ಮಾಡಬೇಕು.)
7. ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ಆಧಾರ್ ಕಾರ್ಡ್.
8. ಎಲ್ಲಾ ಸೆಮಿಸ್ಟರ್ ಗಳ ಪದವಿ ಪ್ರಮಾಣ ಪತ್ರಗಳು.
9. ಪದವಿಯ ಟ್ರಾನ್ಸ್‌ಕ್ರಿಪ್ಟ್ (Transcript).
10. ಪದವಿ ಘಟಿಕೋತ್ಸವ ಪ್ರಮಾಣ ಪತ್ರ.
11. ವಿದೇಶಿ ವಿಶ್ವ ವಿದ್ಯಾಲಯದಿಂದ ಪಡೆದ Unconditional Offer Letter. (ಅರ್ಜಿ ಸಲ್ಲಿಸಿದ ದಿನದಿಂದ ಕನಿಷ್ಠ 3 ತಿಂಗಳ ಅವಧಿ ಚಾಲ್ತಿಯಲ್ಲಿರಬೇಕು)
12. ಮುಚ್ಚಳಿಕೆ ಪ್ರಮಾಣ ಪತ್ರ. (ನಮೂನೆ-ಎ ನಲ್ಲಿ ವಿವರಿಸಲಾಗಿದೆ).

**1.2 ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು Online/Offline ಮೂಲಕ ಪರಿಶೀಲಿಸಲಾಗುತ್ತದೆ.**

## 2. ಅರ್ಜಿ ಸಲ್ಲಿಸಲು ಹೊಂದಿರಬೇಕಾದ ಅರ್ಹತೆಗಳು.

1. ಅಭ್ಯರ್ಥಿಯು ಕರ್ನಾಟಕದ ನಿವಾಸಿಯಾಗಿರಬೇಕು (ಕನಿಷ್ಠ 10 ವರ್ಷಗಳು ರಾಜ್ಯದಲ್ಲಿ ವ್ಯಾಸಂಗ ಮಾಡಿರಬೇಕು ಹಾಗೂ ವ್ಯಾಸಂಗ ಮಾಡಿದ ಬಗ್ಗೆ ಶೈಕ್ಷಣಿಕ ದಾಖಲೆಗಳನು, ಸಲ್ಲಿಸಬೇಕು)
2. ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ ಜಾತಿಗೆ ಸೇರಿರಬೇಕು.
3. ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ QS/US News Overall Global Ranking ನಲ್ಲಿ 325 ನೇ ಸ್ಥಾನದ ಒಳಗಿರುವ ವಿದೇಶಿ ವಿಶ್ವ ವಿದ್ಯಾಲಯದಿಂದ Unconditional Offer Letter ನ್ನು ಕಡ್ಡಾಯವಾಗಿ ಪಡೆದಿರಬೇಕು.
4. ಪಿ.ಹೆಚ್.ಡಿ ಅಧ್ಯಯನಕ್ಕೆ QS/US News Overall Global Ranking ನಲ್ಲಿ 250 ನೇ ಸ್ಥಾನದ ಒಳಗಿರುವ ವಿದೇಶಿ ವಿಶ್ವ ವಿದ್ಯಾಲಯದಿಂದ Unconditional Offer Letter ನ್ನು ಕಡ್ಡಾಯವಾಗಿ ಪಡೆದಿರಬೇಕು.
5. QS/US News Overall Global Rank ಬದಲಾವಣೆಗೆ ಸಂಬಂಧಿಸಿದಂತೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶದಂತೆ ಬದಲಾವಣೆಗೆ ಒಳಪಟ್ಟಿರುತ್ತದೆ
6. ವಿದೇಶಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ/ಪಿಹೆಚ್‌ಡಿ ಅಧ್ಯಯನ ಮಾಡಲು ಉದ್ದೇಶಿಸಿರುವ ಅಭ್ಯರ್ಥಿ/ಸಂಶೋಧನಾರ್ಥಿಯು ಯು.ಜಿ.ಸಿ ಮಾನ್ಯತೆ ಪಡೆದ ವಿಶ್ವ ವಿದ್ಯಾಲಯದಿಂದ ತೇರ್ಗಡೆಯಾಗಿರಬೇಕು.
7. ಸ್ನಾತಕೋತ್ತರ ಪದವಿಗೆ ಗರಿಷ್ಠ ವಯೋಮಿತಿ 40 ವರ್ಷ ಹಾಗೂ ಪಿಹೆಚ್‌ಡಿ ಅಧ್ಯಯನಕ್ಕೆ ಗರಿಷ್ಠ ವಯೋಮಿತಿ 45 ವರ್ಷಗಳನ್ನು ಮೀರಿರಬಾರದು.
8. ಅರ್ಹತೆಯಲ್ಲಿ ಯಾವುದೇ ರೀತಿಯ ಬದಲಾವಣೆ ತರುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ

| | | |
|---|---|---|
| 3. | ಇ.) ರೂ. 20.00 ಲಕ್ಷದಿಂದ ರೂ.30.00 ಲಕ್ಷದವರೆಗಿನ ಕುಟುಂಬದ ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ : | ಈ ಮೇಲ್ಕಂಡ ಎಲ್ಲಾ ವೆಚ್ಚದಲ್ಲಿ ಶೇ. 25 ರಷ್ಟು ಸಹಾಯಧನ ಹಾಗೂ ಶೇ. 50 ರಷ್ಟು ಸಾಲವನ್ನು ಇಲಾಖಾ ಅಧೀನದಲ್ಲಿರುವ ವಿವಿಧ ನಿಗಮಗಳಿಂದ ಅರ್ಹ ಅಭ್ಯರ್ಥಿಗಳು ಪಡೆಯಬಹುದು. |

- ಅಭ್ಯರ್ಥಿಗಳು ವಿದೇಶಕ್ಕೆ ತೆರಳಿ ವಿದೇಶಿ ಬ್ಯಾಂಕ್ ಖಾತೆಯನ್ನು ತೆರೆದ ನಂತರ, ಇಲಾಖೆಯ ಅಪೇಕ್ಷೆಯ ಅನ್ವಯ ಕಾಲಕಾಲಕ್ಕೆ ಎಲ್ಲಾ ಅಗತ್ಯ ದಾಖಲೆಗಳನ್ನು ಒದಗಿಸಿದ ಮೇಲೆ ಅನುದಾನದ ಲಭ್ಯತೆಗೆ ಅನುಗುಣವಾಗಿ ಧನಸಹಾಯವನ್ನು ಅಭ್ಯರ್ಥಿಯ ವಿದೇಶಿ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡುವುದು.
- ಸೆಮಿಸ್ಟರ್ ವಾರು ವರ್ಷದಲ್ಲಿ 2 ಬಾರಿ ಅಥವಾ ವಿಶ್ವ ವಿದ್ಯಾಲಯಗಳು ನಿಗದಿಪಡಿಸಿದ ಅವಧಿಗೆ ಅನುಗುಣವಾಗಿ ಕೋರ್ಸ್ ಶುಲ್ಕ ಬಿಡುಗಡೆ ಮಾಡುವುದು. ಆದರೆ ನಿರ್ವಹಣಾ ವೆಚ್ಚವನ್ನು ವರ್ಷದಲ್ಲಿ 2 ಬಾರಿ ಮಾತ್ರ ಬಿಡುಗಡೆ ಮಾಡುವುದು.
- ಒಂದೊಮ್ಮೆ ಅಭ್ಯರ್ಥಿಯು ತನ್ನ ಸ್ವಂತ ಹಣದಲ್ಲಿ ಸಹಾಯಧನ ಹೊರತುಪಡಿಸಿ ಉಳಿದ ವೆಚ್ಚವನ್ನು ಭರಿಸಲು ಒಪ್ಪಿದರೆ, ಸಾಲವನ್ನು ಒದಗಿಸುವ ಅವಕಾಶ ಇರುವುದಿಲ್ಲ.
- ಅಭ್ಯರ್ಥಿಯು ಬ್ಯಾಂಕ್ /ಇತರೆ ಮೂಲಗಳಿಂದ ಸಾಲ ಪಡೆದರೆ, ಇಲಾಖೆಯಿಂದ ಸಹಾಯಧನದ ಭಾಗವನ್ನು ಮಾತ್ರ ಪಾವತಿಸಲಾಗುವುದು.

### 4.ನಿಗಮಗಳ ಮೂಲಕ ಸಾಲದ ವ್ಯವಸ್ಥೆ:-

"ಡಾ. ಬಿ.ಆರ್. ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯವೇತನ ಯೋಜನೆಯಡಿ ಆಯ್ಕೆಯಾಗಿ "ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ, ಬೆಂಗಳೂರು ಇವರಿಂದ ಶಿಫಾರಸ್ಸುಗೊಂಡ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ನಿಗಮಗಳು ನಿಯಮಾನುಸಾರ ಕಾಲಕಾಲಕ್ಕೆ ಸಾಲದ ಬಾಬ್ತನ್ನು ಬಿಡುಗಡೆ ಮಾಡುವುದು.

ಸಾಲದ ಮೊತ್ತಕ್ಕೆ ವಾರ್ಷಿಕವಾಗಿ ಶೇಕಡವಾರು ಬಡ್ಡಿಯನ್ನು ಸಂಬಂಧಿಸಿದ ನಿಗಮಗಳ ನಿಯಮ/ ಮಾರ್ಗಸೂಚಿ/ ಷರತ್ತುಗಳನ್ವಯ ನಿಗಧಿಪಡಿಸುವುದು ಅಥವಾ ಸರ್ಕಾರ ಕಾಲ ಕಾಲಕ್ಕೆ ನಿಗದಿಪಡಿಸುವ ಬಡ್ಡಿ ದರಗಳ ಅನ್ವಯ ಬಡ್ಡಿಯನ್ನು ವಿಧಿಸುವುದು.

ಅಭ್ಯರ್ಥಿಯು ಕೋರ್ಸ್ ಪೂರ್ಣಗೊಂಡ ನಂತರ ಮರು ಪಾವತಿ ಕಂತುಗಳಿಗೆ ಸಂಬಂಧಿಸಿದಂತೆ ನಿಗಮಗಳಲ್ಲಿನ ಷರತ್ತುಗಳನ್ವಯ ಅಸಲು, ಬಡ್ಡಿ ಮತ್ತು ಸರಾಸರಿ ಬಡ್ಡಿ ಸೇರಿದಂತೆ ನಿಗಮಗಳು ನಿಯಮಾನುಸಾರ ಅಥವಾ ಷರತ್ತುಗಳ ಅನ್ವಯ ಕ್ರಮವಹಿಸುವುದು.

ಅಭ್ಯರ್ಥಿಯು ಸಾಲ ಪಡೆದು ವ್ಯಾಸಂಗವನ್ನು ಅವಧಿ ಮಧ್ಯದಲ್ಲಿಯೇ ನಿಲ್ಲಿಸಿದರೆ, ಅಥವಾ ಅನುತ್ತೀರ್ಣರಾಗಿ ವ್ಯಾಸಂಗ ಬಿಟ್ಟರೆ ಅಲ್ಲಿಯವರೆಗೆ ನಿಗಮದಿಂದ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಸಾಲದ ಕಂತುಗಳ ಒಟ್ಟು ಮೊತ್ತವನ್ನು ವಸೂಲಿ ಮಾಡುವ ಸಂಬಂಧ ನಿಗಮಗಳಲ್ಲಿನ ಷರತ್ತುಗಳನ್ವಯ ಕ್ರಮವಹಿಸುವುದು.

### 5. ಸಹಾಯ ಧನ ಬಿಡುಗಡೆ:

1. ವಿಶ್ವ ವಿದ್ಯಾಲಯದ ಶುಲ್ಕ/ನಿರ್ವಹಣಾ ವೆಚ್ಚ, ವೀಸಾಶುಲ್ಕ, ವಿಮಾ ವೆಚ್ಚ ಹಾಗೂ ಇತರೆ ವೆಚ್ಚವನ್ನು ಬಿಡುಗಡೆ ಮಾಡುವ ಪೂರ್ವದಲ್ಲಿ ಅಭ್ಯರ್ಥಿಯಿಂದ I – 20 / ಆಫರ್ ಲೆಟರ್/ VISA/ Passport/ Boarding Pass/ ವಿದ್ಯಾರ್ಥಿ ವಿಶ್ವವಿದ್ಯಾಲಯ ಪ್ರವೇಶ ಪಡೆದ ದಾಖಲೆ ಸೇರಿದಂತೆ ಇಲಾಖೆ ಕಾಲಕಾಲಕ್ಕೆ ನಿಗದಿಪಡಿಸಿದ ದಾಖಲೆಗಳನ್ನು ಪಡೆದ ನಂತರ ಅಭ್ಯರ್ಥಿಯ ವಿದೇಶಿ ಬ್ಯಾಂಕ್ ಖಾತೆಗೆ ಧನ ಸಹಾಯ ಬಿಡುಗಡೆ ಮಾಡುವುದು.
2. ಅಭ್ಯರ್ಥಿಯ ಆಫರ್ ಲೆಟರ್/ I-20/VISA/Passport ಸೇರಿದಂತೆ ಎಲ್ಲಾ ದಾಖಲೆಗಳನ್ನು ತನ್ನ ಸ್ವಂತ ಪ್ರಯತ್ನ ಮತ್ತು ಖರ್ಚಿನಿಂದ ಭರಿಸಿ ಪಡೆಯಬೇಕು. ಇವುಗಳನ್ನು ಪಡೆಯಲು ಇಲಾಖೆಯಿಂದ ಯಾವುದೇ ಸಹಾಯ ಹಾಗೂ ಧನ ಸಹಾಯ ನೀಡಲಾಗುವುದಿಲ್ಲ.
3. ಧನ ಸಹಾಯವನ್ನು ಸೆಮಿಸ್ಟರ್ ವಾರು ವಿಂಗಡಿಸಿ ಬಿಡುಗಡೆ ಮಾಡಬೇಕು. ಮೊದಲ ಸೆಮಿಸ್ಟರ್ ಹೊರತು ಪಡಿಸಿ ಉಳಿದ ಸೆಮಿಸ್ಟರ್ ಗಳ ಧನ ಸಹಾಯ ಬಿಡುಗಡೆ ಪೂರ್ವದಲ್ಲಿ ಅಭ್ಯರ್ಥಿ ಹಿಂದಿನ ಸೆಮಿಸ್ಟರ್ ನಲ್ಲಿ ಶೈಕ್ಷಣಿಕ ಪ್ರಗತಿ ಹಾಗೂ ಮುಂದಿನ ಸೆಮಿಸ್ಟರ್ ಗೆ ಪ್ರವೇಶ ಪಡೆದಿರುವುದನ್ನು ಖಚಿತ ಪಡಿಸಿಕೊಂಡು ಧನ ಸಹಾಯ ಬಿಡುಗಡೆಮಾಡಬೇಕು.
4. ಅಭ್ಯರ್ಥಿಯು ಒಂದು ಸೆಮಿಸ್ಟರ್ ನಲ್ಲಿ ಕೆಲವೊಂದು ವಿಷಯದಲ್ಲಿ ಅನುತ್ತೀರ್ಣನಾಗಿದ್ದಾಗ್ಯೂ ಮುಂದಿನ ಸೆಮಿಸ್ಟರ್ ಗೆ ಪ್ರವೇಶ ಪಡೆಯಲು ಅರ್ಹನಾಗಿರುವ ಬಗ್ಗೆ ವಿಶ್ವವಿದ್ಯಾಲಯ ದೃಢೀಕರಿಸಿದರೆ ಮಾತ್ರ ಅಂತಹ ಅಭ್ಯರ್ಥಿಗೆ ನಿಗಧಿತ ಧನ ಸಹಾಯವನ್ನು ಬಿಡುಗಡೆ ಮಾಡುವುದು.
5. ಒಂದೊಮ್ಮೆ ಅಭ್ಯರ್ಥಿಗೆ ಮುಂದಿನ ಸೆಮಿಸ್ಟರ್ ಗೆ ಅರ್ಹತೆ ಪಡೆಯದಿದ್ದರೆ, ಅಂತಹ ಅಭ್ಯರ್ಥಿಗೆ ಸರ್ಕಾರದಿಂದ ನೀಡಬಹುದಾದ ಎಲ್ಲಾ ಧನ ಸಹಾಯವನ್ನು ಸ್ಥಗಿತಗೊಳಿಸತಕ್ಕದ್ದು, ಉಳಿಕೆ ಸೆಮಿಸ್ಟರ್ ಅನ್ನು ಅಭ್ಯರ್ಥಿಯು ತನ್ನ ಸ್ವಂತ ಖರ್ಚಿನಿಂದ ಪೂರೈಸಬೇಕು. ಇಲಾಖೆಯಿಂದ ಯಾವುದೇ ಧನ ಸಹಾಯ ನೀಡಲಾಗುವುದಿಲ್ಲ.

ಅಭ್ಯರ್ಥಿಯು ತನ್ನ ಕೋರ್ಸ್ ಅನ್ನು ಪೂರ್ಣಗೊಳಿಸಿದ ತರುವಾಯ ಇಲಾಖೆಗೆ ಪದವಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು ಹಾಗೂ ಉದ್ಯೋಗ ಸಂಬಂಧಿತ ಮಾಹಿತಿಯನ್ನು ಕಾಲಕಾಲಕ್ಕೆ ಸರ್ಕಾರ ಕೇಳಿದಾಗ ಒದಗಿಸಬೇಕು.

### 6. ಅಭ್ಯರ್ಥಿಯ ಆಯ್ಕೆ:

ವರ್ಷ ಪೂರ್ತಿ ಆನ್ ಲೈನ ಮೂಲಕ ಅರ್ಜಿಯನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದ್ದು "ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಮೂಲಕ ಡಾ. ಬಿ.ಆರ್. ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯ ವೇತನ ಯೋಜನೆಯ ಮಾರ್ಗಸೂಚಿಯನ್ವಯ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು.

1. ಅಭ್ಯರ್ಥಿಗಳ ಆಯ್ಕೆ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರ ನೀಡುವ ಜಾತಿ ಮತ್ತು ಆದಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಆರ್.ಡಿ. (R.D) ಸಂಖ್ಯೆಯ ಆಧಾರದ ಮೇಲೆ Online ಮೂಲಕ ನೈಜತೆಯನ್ನು ಖಚಿತಪಡಿಸಿಕೊಳ್ಳುವುದು.
2. ಆಯ್ಕೆಯಾದ ಅಭ್ಯರ್ಥಿಯು ಮಂಜೂರಾತಿ ಪತ್ರ ಪಡೆದ ಗರಿಷ್ಠ 1 ವರ್ಷದೊಳಗೆ ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳಬೇಕು. ನಿಗದಿತ ಕಾಲಾವಧಿಯಲ್ಲಿ ಉನ್ನತ ವ್ಯಾಸಂಗಕ್ಕೆ ತೆರಳಲು ಅಭ್ಯರ್ಥಿಯು ವಿಫಲನಾದರೆ, ಅಭ್ಯರ್ಥಿಗೆ ನೀಡಿರುವ ಆಯ್ಕೆ ಪತ್ರ ತನ್ನಿಂದ ತಾನೇ ರದ್ದುಗೊಳ್ಳುತ್ತದೆ.
3. ಮಂಜೂರಾತಿ ಪತ್ರ ಪಡೆದ ಅಭ್ಯರ್ಥಿಯು, ತಮ್ಮ ಸ್ವಂತ ವೆಚ್ಚದಲ್ಲಿ ವೀಸಾ/ ಪಾಸ್ ಪೋರ್ಟ್/ ಪ್ರವೇಶ ಸೇರಿದಂತೆ ಎಲ್ಲಾ ಅಗತ್ಯ ದಾಖಲೆಗಳನ್ನು ಸಿದ್ಧ ಪಡಿಸಿಕೊಂಡು ವಿದೇಶಕ್ಕೆ ತೆರಳುವುದು. ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಪ್ರವೇಶ ಪಡೆಯುವುದು, ವೀಸಾ, ಪಾಸ್ ಪೋರ್ಟ್ ಸೇರಿದಂತೆ ಯಾವುದೇ ರೀತಿಯ ದಾಖಲೆ ಸಂಗ್ರಹಣೆಗೆ ಇಲಾಖೆಯ ಸಹಾಯ ನಿರೀಕ್ಷಿಸಬಾರದು.
4. ಅಭ್ಯರ್ಥಿಯು ಒಂದು ಬಾರಿ ಸ್ನಾತಕೋತ್ತರ ಪದವಿ ಮತ್ತು ಪಿಹೆಚ್‌ಡಿ ಅಧ್ಯಯನಕ್ಕೆ ಈ ಯೋಜನೆಯಡಿ ಆಯ್ಕೆಯಾಗಲು ಅರ್ಹರಿರುತ್ತಾರೆ.
5. ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅಭ್ಯರ್ಥಿಯು ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಇಲಾಖೆ, ನಿಗಮ, ಸೊಸೈಟಿ ಅಥವಾ ಸಂಸ್ಥೆಯಿಂದ ಸಹಾಯ ಧನ ಪಡೆದಿದ್ದರೆ, ಈ ಯೋಜನೆಯಡಿ ಧನಸಹಾಯ ಪಡೆಯಲು ಅರ್ಹರಲ್ಲ.
6. ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ ಈ ಯೋಜನೆಯ ಮಾರ್ಗಸೂಚಿ ಅನ್ವಯ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು.
7. ಆಯ್ಕೆಗೆ ಅರ್ಹರಾದ ಅಭ್ಯರ್ಥಿಗಳಿಗೆ ಮಂಜೂರಾತಿ ಪತ್ರವನ್ನು ಅಪರ ನಿರ್ದೇಶಕರು, "ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ, ಸಮಾಜ ಕಲ್ಯಾಣ ಇಲಾಖೆ ರವರು ನೀಡುವುದು.

## 7. ಗುರಿ ಮತ್ತು ಅನುದಾನ:

ಡಾ. ಬಿ.ಆರ್. ಅಂಬೇಡ್ಕರ್ ಅಂತರಾಷ್ಟ್ರೀಯ ಶಿಷ್ಯ ವೇತನ ಯೋಜನೆಯ ಅನುಷ್ಠಾನಕ್ಕೆ ಪ್ರತಿ ವರ್ಷ "ಇಂದಿರಾಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರಕ್ಕೆ ಸರ್ಕಾರದಿಂದ ಒದಗಿಸಲಾಗುವ ಅನುದಾನಕ್ಕೆ ಅನುಗುಣವಾಗಿ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಗುರಿಯನ್ನು ನಿಗಧಿಪಡಿಸಿಕೊಳ್ಳುವುದು.

## 8. ಕೌಟುಂಬಿಕ ಮಿತಿ:

1. ಈ ಯೋಜನೆಯಡಿ ಸೌಲಭ್ಯವನ್ನು ಒಂದು ಕುಟುಂಬದಿಂದ ಒಬ್ಬರು ಮಾತ್ರ ಪಡೆಯಬಹುದು. ಆದರೆ, ಎರಡನೇ ಆಯ್ಕೆ ಹೆಣ್ಣು ಮಗುವಾಗಿದ್ದ ಸಂಧರ್ಭದಲ್ಲಿ ಆಯ್ಕೆಗೆ ಪರಿಗಣಿಸಬಹುದು.
2. ಆದರೆ ಮೊದಲ ಆಯ್ಕೆಯಲ್ಲಿ ಪುರುಷ ಅಭ್ಯರ್ಥಿ ಆಯ್ಕೆಯಾಗಿ ಅದೇ ಕುಟುಂಬದ ಎರಡನೇ ಅಭ್ಯರ್ಥಿಯಾಗಿ ಮಹಿಳಾ ಅಭ್ಯರ್ಥಿ ಅರ್ಜಿ ಸಲ್ಲಿಸಿದರೆ ಅಂತಹ

ಮಹಿಳಾ ಅಭ್ಯರ್ಥಿಯನ್ನು ಆಯ್ಕೆಗೆ ಪರಿಗಣಿಸಬಹುದಾಗಿದೆ. ಅದೇ ರೀತಿ ಒಂದು ಕುಟುಂಬದಿಂದ ಈಗಾಗಲೇ ಒಂದು ಮಹಿಳಾ ಅಭ್ಯರ್ಥಿ ಆಯ್ಕೆಯಾಗಿದ್ದರೆ, ಎರಡನೇ ಆಯ್ಕೆ ಬಯಸಿ ಅದೇ ಕುಟುಂಬದ ಮಹಿಳಾ ಅಭ್ಯರ್ಥಿ ಅರ್ಜಿಸಲ್ಲಿಸಲು ಅರ್ಹರಿರುವುದಿಲ್ಲ.

9.ಸರ್ಕಾರಿ ನೌಕರರಿಗೆ ಅವಕಾಶ:-

1. ವಿದೇಶಿ ಉನ್ನತ ವ್ಯಾಸಂಗ ಸಹಾಯ ಧನ ಪಡೆಯಲು ಸರ್ಕಾರಿ ನೌಕರರು ಅರ್ಜಿ ಸಲ್ಲಿಸಲು ಹಾಗೂ ಆಯ್ಕೆಯಾಗಲೂ ಅರ್ಹರಿರುತ್ತಾರೆ.
2. ಅಂತಹ ನೌಕರರು ಈ ಯೋಜನೆಯಡಿ ನಿಗಧಿಪಡಿಸಿದ ಜಾತಿ, ಆದಾಯ ಮಿತಿ, ವಿಶ್ವವಿದ್ಯಾಲಯ, ಮೊದಲಾದ ಎಲ್ಲಾ ಮಾನದಂಡಗಳನ್ನು ಪೂರೈಸಬೇಕು.
3. ಕಾರ್ಯ ನಿರ್ವಹಿಸುತ್ತಿರುವ ಇಲಾಖೆಯ ಆಯ್ಕೆ ಪ್ರಾಧಿಕಾರದಿಂದ "No Objection Certificate" ಪಡೆದು ಸಲ್ಲಿಸಬೇಕು.
4. ಪರಿಶಿಷ್ಟ ಜಾತಿ ನೌಕರರು QS/US News Overall Global Ranking 10 ರಲ್ಲಿನ ವಿಶ್ವ ವಿದ್ಯಾಲಯಗಳಲ್ಲಿ ಪ್ರವೇಶ ಪಡೆದಲ್ಲಿ ಅಂತಹ ಅಭ್ಯರ್ಥಿಗಳಿಗೆ ಆದಾಯ ಮಿತಿಯಲ್ಲಿ ವಿನಾಯ್ತಿ ನೀಡಲಾಗಿದೆ.

10. ಮುಂಗಡ ಪಾವತಿ:

1. ವಾರ್ಷಿಕ ಆದಾಯ ರೂ. 10 ಲಕ್ಷದ ಆದಾಯ ಮಿತಿಯೊಳಗೆ ಇರುವ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ವಿದೇಶಕ್ಕೆ ತೆರಳುವ ಮುಂಚಿತವಾಗಿ ನಿರ್ವಹಣೆ ವೆಚ್ಚ, ರೂ.16.00 ಲಕ್ಷಗಳಲ್ಲಿ ರೂ.5.00 ಲಕ್ಷಗಳನ್ನು ಮುಂಗಡವಾಗಿ ಅಭ್ಯರ್ಥಿಯ ಭಾರತೀಯ ಬ್ಯಾಂಕ್ ಖಾತೆಗೆ ವರ್ಗಾಯಿಸುವುದು.
2. ಒಂದು ವೇಳೆ ಅಭ್ಯರ್ಥಿಗಳಿಗೆ ವಿದೇಶಿ ವಿಶ್ವ ವಿದ್ಯಾಲಯಗಳು ಮುಂಗಡವಾಗಿ ಕೋರ್ಸ್ ಶುಲ್ಕವನ್ನು ಪಾವತಿಸುವಂತೆ ಕೇಳಿದಲ್ಲಿ ಅಂತಹ ಅಭ್ಯರ್ಥಿಗಳ ವಿದೇಶಿ ವಿಶ್ವ ವಿದ್ಯಾಲಯಗಳಿಂದ ದೃಢೀಕರಣವನ್ನು ಪಡೆದು ಕೋರ್ಸ್ ಶುಲ್ಕದ ಮುಂಗಡ ಮೊತ್ತವನ್ನು ವಿದೇಶಿ ವಿಶ್ವ ವಿದ್ಯಾಲಯದ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡುವುದು.
3. ವಿದೇಶಿ ವಿಶ್ವ ವಿದ್ಯಾಲಯಕ್ಕೆ ಹಾಗೂ ಅಭ್ಯರ್ಥಿಗೆ ಮುಂಗಡವಾಗಿ ಬಿಡುಗಡೆ ಮಾಡಿದ ನಂತರ ಅಭ್ಯರ್ಥಿಯು ವಿದೇಶಕ್ಕೆ ತೆರಳಲು ವಿಫಲನಾದರೆ ಅಂತಹ ಅಭ್ಯರ್ಥಿಯಿಂದ ಪೂರ್ಣ ವೆಚ್ಚವನ್ನು ವಸೂಲಿ ಮಾಡುವುದು. ಅಭ್ಯರ್ಥಿಯು ಹಿಂದಿರುಗಿಸಲು ವಿಫಲನಾದರೆ ಕಾನೂನುರೀತ್ಯಾ ಕ್ರಮಕೈಗೊಂಡು ಭೂಕಂದಾಯ ರೂಪದಲ್ಲಿ ಅಭ್ಯರ್ಥಿಯಿಂದ ವಸೂಲು ಮಾಡುವುದು.
4. ಬಿಡುಗಡೆ ಪೂರ್ವದಲ್ಲಿ ಅಭ್ಯರ್ಥಿಯಿಂದ VISA, AIR TICKET ಮತ್ತು ಭಾರತೀಯ ಬ್ಯಾಂಕ್ ಖಾತೆಯ ವಿವರ ಹಾಗೂ ಅಭ್ಯರ್ಥಿಯಿಂದ ಸ್ವಯಂ ಘೋಷಿತ ಮುಚ್ಚಳಿಕೆಯನ್ನು ಪಡೆದು ಕ್ರಮವಹಿಸುವುದು.

11. ಪ್ರಯಾಣ ವೆಚ್ಚ :

1. ಕೇವಲ ಅಭ್ಯರ್ಥಿಗೆ ಮಾತ್ರ ತನ್ನ ಕೋರ್ಸಿನ ಪೂರ್ಣಾವಧಿಯಲ್ಲಿ ಒಂದು ಬಾರಿ ಮಾತ್ರ ಎಕಾನಮಿ ಕ್ಲಾಸಿನಲ್ಲಿ ವಿದೇಶಕ್ಕೆ ತೆರಳಲು ಹಾಗೂ ವಿದೇಶದಿಂದ ಹಿಂದಿರುಗಲು ಅವಕಾಶವಿದೆ.
2. ವ್ಯಾಸಂಗ ಮುಗಿದ 90 ದಿನಗಳೊಳಗೆ ಅಭ್ಯರ್ಥಿಯು ತನ್ನ ರಿಟರ್ನ್ ಟಿಕೇಟ್ ನ ವೆಚ್ಚವನ್ನು ಪಡೆಯಲು ಅಗತ್ಯ ದಾಖಲೆಯನ್ನು ಸಲ್ಲಿಸಬೇಕು. 90 ದಿನದ ನಂತರ ಬರಬಹುದಾದ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.
3. ಆಯ್ಕೆಗೊಂಡ ಅಭ್ಯರ್ಥಿಗೆ ಎಮ್.ಎಸ್.ಐ.ಎಲ್ ಅಥವಾ ಸರ್ಕಾರದಿಂದ ನಿಗಧಿಪಡಿಸಿದ ಇತರೆ ಸಂಸ್ಥೆಗಳ ಮುಖಾಂತರ ವಿಮಾನಯಾನ ವ್ಯವಸ್ಥೆಯನ್ನು ಇಲಾಖಾವತಿಯಿಂದ ಕಲ್ಪಿಸುವುದು.

12.ಕೋರ್ಸ್ ಅವಧಿ:

1. ಸ್ನಾತಕೋತ್ತರ ಪದವಿ ಅಧ್ಯಯನ ಮಾಡುವ ಅಭ್ಯರ್ಥಿಗಳಿಗೆ ಗರಿಷ್ಠ 2 ವರ್ಷ ಧನ ಸಹಾಯ ಒದಗಿಸಲಾಗುತ್ತದೆ. ಎರಡು ಅಥವಾ ಮೂರು ಸೆಮಿಸ್ಟರ್ ನ ಸ್ನಾತಕೋತ್ತರ ಪದವಿಯಾಗಿದ್ದರೆ, ಎರಡು ಅಥವಾ ಮೂರು ಸೆಮಿಸ್ಟರ್ ಗೆ ಮಾತ್ರ ಧನ ಸಹಾಯ ನೀಡುವುದು.
2. ಪಿ. ಹೆಚ್.ಡಿ. ಪದವಿ ಅಧ್ಯಯನ ಮಾಡುವ ಅಭ್ಯರ್ಥಿಗಳಿಗೆ ಗರಿಷ್ಠ 4 ವರ್ಷ ಧನ ಸಹಾಯ ಒದಗಿಸುವುದು ಅಥವಾ 4 ವರ್ಷದ ಒಳಗೆ ಸಂಶೋಧನೆ ಪೂರ್ಣಗೊಂಡ ಅವಧಿಗೆ ಮಾತ್ರ ಧನ ಸಹಾಯ ನೀಡುವುದು.

13.ಅಂತರಾಷ್ಟ್ರೀಯ/ರಾಷ್ಟ್ರ ಮಟ್ಟದಲ್ಲಿ ಕ್ರೀಡೆ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿರುವ ಅಭ್ಯರ್ಥಿಗಳಿಗೆ ಅರ್ಹತೆ:

1) ಆಯ್ಕೆ ಸಮಿತಿ:

| ಕ್ರ.ಸಂ | ಅಧಿಕಾರಿಗಳು | ಪದನಾಮ |
|---|---|---|
| 01. | ಅಪರ ನಿರ್ದೇಶಕರು,<br>ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,<br>ಬೆಂಗಳೂರು. | ಅಧ್ಯಕ್ಷರು |
| 02. | ಆಯುಕ್ತರು,<br>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,<br>ಬೆಂಗಳೂರು ರವರಿಂದ ನಾಮನಿರ್ದೇಶನಗೊಂಡ<br>ಅಧಿಕಾರಿಗಳು. | ಸದಸ್ಯರು |
| 03. | ನಿರ್ದೇಶಕರು,<br>ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರಿಂದ<br>ನಾಮನಿರ್ದೇಶನಗೊಂಡ ಅಧಿಕಾರಿಗಳು | ಸದಸ್ಯರು |
| 04. | ಕಾರ್ಯನಿರ್ವಾಹಕ ನಿರ್ದೇಶಕರು,<br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ( ಕ್ರೈಸ್)<br>ರವರಿಂದ ನಾಮನಿರ್ದೇಶನಗೊಂಡ ಅಧಿಕಾರಿಗಳು. | ಸದಸ್ಯರು |

| | | |
|---|---|---|
| 05. | ಉಪ ನಿರ್ದೇಶಕರು (ಶಿಕ್ಷಣ)<br>ಆಯುಕ್ತರ ಕಾರ್ಯಾಲಯ,<br>ಸಮಾಜ ಕಲ್ಯಾಣ ಇಲಾಖೆ,<br>ಬೆಂಗಳೂರು. | ಸದಸ್ಯರು |
| 06. | ಮುಖ್ಯ ಆಡಳಿತಾಧಿಕಾರಿಗಳು /<br>ಉಪ ನಿರ್ದೇಶಕರು,<br>ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,<br>ಬೆಂಗಳೂರು. | ಸದಸ್ಯ ಕಾರ್ಯದರ್ಶಿಗಳು |

**2) ವಿಶೇಷ ಅರ್ಹತೆ:**

1. ಅಭ್ಯರ್ಥಿಯು ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ಕ್ಷೇತ್ರದಲ್ಲಿ ರಾಷ್ಟ್ರೀಯ /ಅಂತರಾಷ್ಟ್ರೀಯ ಮಟ್ಟದಲ್ಲಿ ಅಪ್ರತಿಮ ಸಾಧನೆ ಮಾಡಿರಬೇಕು.
2. ಶೈಕ್ಷಣಿಕ ಕ್ಷೇತ್ರದಲ್ಲಿ ವಿಶೇಷಾತಿವಿಶೇಷ ಸಾಧನೆ ಮಾಡಿ, ದೇಶದ ಆಸ್ತಿಯಾಗುವಂತ ಪ್ರತಿಭಾವಂತರಾಗಿರಬೇಕು.
3. ಸಾಂಸ್ಕೃತಿಕ ಹಾಗೂ ಇತರೆ ಯಾವುದೇ ಕ್ಷೇತ್ರದಲ್ಲಿ ಗುರುತಿಸಬಹುದಾದಂತಹ ವಿಶೇಷ ಸಾಧನೆಗೈದಿರಬೇಕು.
4. ಸದರಿ ಕ್ಷೇತ್ರದಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಮಾತ್ರ ಪದವಿ/ಸ್ನಾತಕೋತ್ತರ ಪದವಿ/ಪಿಹೆಚ್‌ಡಿ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲಾಗಿದೆ.

**14. ವಿಶೇಷ ಸೂಚನೆಗಳು**

1. ಅಭ್ಯರ್ಥಿಯು ಸರ್ಕಾರದ ಎಲ್ಲಾ ಷರತ್ತುಗಳನ್ನು ಒಪ್ಪಿರುವ ಬಗ್ಗೆ ಸ್ವಯಂ ಘೋಷಿತ ಮುಚ್ಚಳಿಕೆಯನ್ನು ನೋಟರಿಸಹಿತ ದೃಢೀಕೃತ ರೂ.500/- ಗಳ ಛಾಪಾ ಕಾಗದದಲ್ಲಿ ಒದಗಿಸಬೇಕು.
2. ಅಭ್ಯರ್ಥಿಯು ಯಾವುದಾದರೂ ಕಾರಣದಿಂದ ಉನ್ನತ ವ್ಯಾಸಂಗವನ್ನು ಅರ್ಧಕ್ಕೆ ಕೈಬಿಟ್ಟು ಬಂದರೆ, ಅದರ ಹೊಣೆಗಾರಿಕೆ ಅಭ್ಯರ್ಥಿಯದ್ದಾಗಿರುತ್ತದೆ.
3. ಅಭ್ಯರ್ಥಿಯು ವಿದೇಶಕ್ಕೆ ತೆರಳಿದ ಬಳಿಕ ಉಂಟಾಗಬಹುದಾದ ಯಾವುದೇ ಅವಘಡ, ನ್ಯಾಯಾಂಗಿಕ ಪ್ರಕರಣಗಳಿಗೆ ಅಭ್ಯರ್ಥಿಯೇ ನಿರ್ವಹಿಸಿಕೊಳ್ಳುವುದು ಹಾಗೂ ಸ್ವಂತ ವೆಚ್ಚದಲ್ಲಿ ಅವುಗಳನ್ನು ನಿರ್ವಹಿಸಿಕೊಳ್ಳಬೇಕೆ ವಿನಹ ಸಮಾಜ ಕಲ್ಯಾಣ ಇಲಾಖೆ ಇದಕ್ಕೆ ಉತ್ತರದಾಯಿಯಲ್ಲ. ಸಮಾಜ ಕಲ್ಯಾಣ ಇಲಾಖೆ ಕೇವಲ ಧನಸಹಾಯ ಮಂಜೂರು ಮಾಡುವ ಮೂಲಕ ಅಭ್ಯರ್ಥಿಗಳ ಉನ್ನತ ಶಿಕ್ಷಣಕ್ಕೆ ಸಹಾಯ ಮಾಡುತ್ತದೆ ಹೊರತು ಅಭ್ಯರ್ಥಿಯ ಶೈಕ್ಷಣಿಕ ಚಟುವಟಿಕೆಗಳನ್ನು ಹೊರತುಪಡಿಸಿ ಇನ್ನಾವುದೇ ವೈಯಕ್ತಿಕ ಚಟುವಟಿಕೆಗಳಿಗೆ ಹೊಣೆಗಾರಿಕೆಯನ್ನು ನಿರ್ವಹಿಸತಕ್ಕದಲ್ಲ. ಆದಾಗ್ಯೂ ಈ ಯೋಜನೆಗೆ ಸಂಬಂಧಿಸಿದಂತೆ ಕಾನೂನು ತೊಡಕಿನ ಸಮಸ್ಯೆ ಉಂಟಾದರೆ, ಬೆಂಗಳೂರು ನಗರ ವ್ಯಾಪ್ತಿಯ ನ್ಯಾಯಾಲಯದಲ್ಲಿ ಮಾತ್ರ ಪ್ರಶ್ನಿಸಲು/ದಾಖಲಿಸಲು ಅವಕಾಶವಿರುತ್ತದೆ.
4. ಅಭ್ಯರ್ಥಿಯು ಉನ್ನತ ವ್ಯಾಸಂಗಕ್ಕೆ ತೆರಳುವ ಪೂರ್ವದಲ್ಲಿ ಭಾರತ ಸರ್ಕಾರದ ರಾಯಭಾರಿ ಕಛೇರಿಯ (Indian Embassy) ಮಾರ್ಗಸೂಚಿಯನ್ವಯ ನೊಂದಣಿ, ಪೂರ್ವಾನುಮತಿ ಸೇರಿದಂತೆ ಎಲ್ಲಾ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದು. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿ ಪಾಲನೆಯಲ್ಲಿ ಉಂಟಾಗಬಹುದಾದ ಲೋಪದೋಷಗಳಿಗೆ ಅಭ್ಯರ್ಥಿಯು ಉತ್ತರದಾಯಿಯಾಗಿರುತ್ತಾರೆ.

5. ಅಭ್ಯರ್ಥಿಯು ಸುಳ್ಳು ದಾಖಲೆ ಸಲ್ಲಿಸಿರುವುದು ಅಥವಾ ಅನರ್ಹತೆಯ ಯಾವುದೇ ಅಂಶ ಕಂಡುಬಂದರೆ ಅಂತಹ ಅಭ್ಯರ್ಥಿಗಳು ಯಾವುದೇ ಧನಸಹಾಯ ಪಡೆಯಲು ಅರ್ಹರಿರುವುದಿಲ್ಲ. ಅಂತಹ ಅಭ್ಯರ್ಥಿಯ ಆಯ್ಕೆ ತನ್ನಿಂದ ತಾನೇ ರದ್ದುಗೊಳ್ಳುತ್ತದೆ.
6. ಸುಳ್ಳು ದಾಖಲೆಗಳನ್ನು ನೀಡಿ ಇಲಾಖೆಯ ಧನ ಸಹಾಯ ಪಡೆದಿದ್ದರೆ, ಅಂತಹ ಅಭ್ಯರ್ಥಿಯು ತಾನು ಪಡೆದ ಧನ ಸಹಾಯ ಶೇ. 12%ರ ಬಡ್ಡಿಯೊಂದಿಗೆ ಇಲಾಖೆಗೆ ಹಿಂದಿರುಗಿಸಬೇಕು. ಒಂದೊಮ್ಮೆ ಅಭ್ಯರ್ಥಿಯು ತಾನು ಪಡೆದ ಧನ ಸಹಾಯವನ್ನು ಹಿಂದಿರುಗಿಸಲು ವಿಫಲನಾದರೆ ಕಾನೂನುರೀತ್ಯಾ ಕ್ರಮಕೈಗೊಂಡು ಅಭ್ಯರ್ಥಿಯಿಂದ ವಸೂಲು ಮಾಡುವುದು.
7. ಈ ಯೋಜನೆಯಡಿ ಧನ ಸಹಾಯ ಪಡೆದು ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಿದ ಅಭ್ಯರ್ಥಿಯು ಸ್ವದೇಶಕ್ಕೆ ಹಿಂದಿರುಗಿ ಕಾರ್ಯನಿರ್ವಹಿಸಲು ಮೊದಲ ಆದ್ಯತೆ ನೀಡುವುದು.
8. ವಿದೇಶಿ ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ ಅಧ್ಯಯನ ಪೂರ್ಣಗೊಳಿಸಿದ ಸಂಶೋಧನಾರ್ಥಿಗಳು ತಾವು ಪಡೆದ ಜ್ಞಾನ ಹಾಗೂ ಪ್ರತಿಭೆಯನ್ನು ಸ್ವದೇಶದ ಅಭಿವೃದ್ಧಿದಾಗಿ ಸದುಪಯೋಗಪಡಿಸಿಕೊಳ್ಳುವ ಕಾರಣದಿಂದ ಅಧ್ಯಯನ ಪೂರ್ಣಗೊಂಡ ನಂತರ ಕನಿಷ್ಟ 2 ವರ್ಷಗಳ ಕಾಲ ಸ್ವದೇಶದಲ್ಲಿ ಸೇವೆ ಸಲ್ಲಿಸಬೇಕು.
9. ಅಭ್ಯರ್ಥಿಗಳು ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ತೆರಳುವ ಪೂರ್ವದಲ್ಲಿ ಈ ಯೋಜನೆಯಡಿ ಧನಸಹಾಯ ಕೋರಿ ಅರ್ಜಿಯನ್ನು ಸಲ್ಲಿಸಬೇಕು.
10. ಅರ್ಜಿ ಸಲ್ಲಿಸಿದ ತರುವಾಯ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳುವಷ್ಟರಲ್ಲಿ ತರಗತಿಗಳು ಪ್ರಾರಂಭವಾದ ಹಿನ್ನೆಲೆಯಲ್ಲಿ ಅಭ್ಯರ್ಥಿಯು ವಿದೇಶಕ್ಕೆ ತೆರಳಿದ ಸಂದರ್ಭದಲ್ಲಿ ಪೋಷಕರು ಮೂಲ ದಾಖಲೆಗಳೊಂದಿಗೆ ದಾಖಲೆ ಪರಿಶೀಲನೆಗೆ ಹಾಜರಾಗಲು ಅವಕಾಶವಿರುತ್ತದೆ.
11. ಅಭ್ಯರ್ಥಿಯು ವಿದೇಶಕ್ಕೆ ತೆರಳಿ ತರಗತಿಗಳು ಪ್ರಾರಂಭವಾದ ನಂತರ ಈ ಯೋಜನೆಯಡಿ ಅರ್ಜಿಸಲ್ಲಿಸಲು ಅಥವಾ ಆಯ್ಕೆಯಾಗಲು ಅರ್ಹರಿರುವುದಿಲ್ಲ.
12. ವಿದೇಶ/ವಿದೇಶಿ ವಿಶ್ವ ವಿದ್ಯಾಲಯಗಳ ಪ್ರವೇಶ ಸಂದರ್ಭದಲ್ಲಿ ನಿರೀಕ್ಷಿಸುವ GRE/GMAT/IELTS/TOEFL ಸೇರಿದಂತೆ ಇತರೆ ಅರ್ಹತಾ ಪರೀಕ್ಷೆಯನ್ನು ಅಭ್ಯರ್ಥಿಯು ತನ್ನ ಸ್ವಂತ ವೆಚ್ಚದಿಂದ ಪೂರ್ಣಗೊಳಿಸಬೇಕು.
13. ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಅಭ್ಯರ್ಥಿಯು ಈ ಯೋಜನೆಯಡಿ ಆಯ್ಕೆಯಾಗಿದ್ದಾರೆಂದು ಪರಿಗಣಿಸಲು ಅವಕಾಶವಿರುವುದಿಲ್ಲ.
14. ಈ ಯೋಜನೆಯು ವಿದ್ಯಾರ್ಥಿ ವೇತನ ರೂಪದ ಧನ ಸಹಾಯ ಯೋಜನೆಯಾಗಿದ್ದು, ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಶೈಕ್ಷಣಿಕ ಶ್ರೇಯೋಭಿವೃದ್ಧಿಗಾಗಿ ಜಾರಿಗೆ ತರಲಾಗಿದೆ. ಯೋಜನೆಯಡಿ ಧನಸಹಾಯ ಪಡೆದ ಅಭ್ಯರ್ಥಿಗಳು ಉತ್ತಮ ಅಂಕ ಗಳಿಸಿ ಉನ್ನತ ಸ್ಥಾನವನ್ನು ಅಲಂಕರಿಸಬೇಕೆಂದು ಇಲಾಖೆ ಆಶಯವಾಗಿರುತ್ತದೆ. ಅಭ್ಯರ್ಥಿಯ ಆಯ್ಕೆಯ ಪೂರ್ಣಾಧಿಕಾರವನ್ನು ಸರ್ಕಾರ ಹೊಂದಿರುತ್ತದೆ. ಸಂದರ್ಭಾನುಸಾರ ಮಾರ್ಗಸೂಚಿಯ ನಿಯಮಾವಳಿಯ ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 580 ವೆಚ್ಚ-3/2024 ದಿನಾಂಕ: 06.09.2024ರಲ್ಲಿ ನೀಡಿರುವ ಸಹಮತಿ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ ಸಂ: ಎಫ್ ಡಿ 4 ಟಿ ಎಫ್ ಟಿ 2024 ದಿನಾಂಕ:04-07-2024 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

12/9/24

(ಎಲ್. ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಮಾಜ ಕಲ್ಯಾಣ ಇಲಾಖೆ.

12/9/2024

ಇವರಿಗೆ:-

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು,
5. ಎಲ್ಲಾ ಜಿಲ್ಲೆಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
6. ಎಲ್ಲಾ ಜಿಲ್ಲೆಯ ಜಂಟಿ/ಉಪ ನಿರ್ದೇಶಕರು.
7. ಕಾರ್ಯದರ್ಶಿ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ ಜಿಲ್ಲೆ.
8. ನಿರ್ದೇಶಕರು, ಎಸ್‌ಸಿಎಸ್‌ಪಿ/ಟಿಎಸ್‌ಪಿ ಕೋಶ, ಕಲ್ಯಾಣ ಕೇಂದ್ರ, ಬೆಂಗಳೂರು.
9. ಅಪರ ನಿರ್ದೇಶಕರು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಬೆಂಗಳೂರು.
10. ಎಲ್ಲಾ ಸಮಾಜ ಕಲ್ಯಾಣ /ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಎಲ್ಲಾ ನಿಗಮ/ಮಂಡಳಿಗಳು
11. ಎನ್‌ಟಿಟಿಎಫ್ ಕೇಂದ್ರ, ಗದಗ ಜಿಲ್ಲೆ.
12. ಕಲ್ಯಾಣ ಕೇಂದ್ರ, 24/7 helpdesk, ಸಮಾಜ ಕಲ್ಯಾಣ ಇಲಾಖೆ, ಯವನಿಕ ಆವರಣ, ನೃಪತುಂಗ ರಸ್ತೆ, ಡಾ|| ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಗಳು:

1. ಮಾನ್ಯ ಸಮಾಜ ಕಲ್ಯಾಣ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.